ಶ್ರೀ ಎಂ. ನಾಗಪ್ಪ.—ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಕನ್ನಡದಲ್ಲಿ ಬರೆದುಕೊಳ್ಳುವ ಪದ್ಧತಿ ನಾಲ್ಕಾರು ವರ್ಷಗಳಿಂದ ನಡೆಯುತ್ತ ಬಂದಿತ್ತು. ಅದನ್ನು ಈಗ ಇಂಗ್ಲಿಷಿನಲ್ಲಿಯೇ ರಿಕಾರ್ಡ್ ಮಾಡಬೇಕೆಂದು ಹೈಕೋರ್ಟಿನವರು ಒಂದು ನೋಟಿಫಿಕೇಷನ್ ತೆಗೆದಮೇಲೆ ಅದಕ್ಕೆ ಸರ್ಕಾರ ಕ್ಷಕರೆನ್ಸ್ ಕೊಟ್ಟಿದೆ. ಈ ಕೋರ್ಟ್‌ಗಳಲ್ಲಿ ಕನ್ನಡ ಭಾಷೆಯಲ್ಲಿ ವ್ಯವಹಾರ ಆಗಬಾರದು ಎನ್ನುವುದು ಸರ್ಕಾರದ ನೀತಿಯೇ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಕನ್ನಡ ಮತ್ತು ಇಂಗ್ಲಿಷಿನಲ್ಲಿ ಎರಡು ಭಾಷೆಯಲ್ಲಿಯೂ ಬರೆದುಕೊಳ್ಳುತ್ತಿದ್ದರು. ಇಂಗ್ಲಿಷಿನಲ್ಲಿ ಸ್ವಲ್ಪ ಮತ್ತು ಕನ್ನಡದಲ್ಲಿ ಸ್ವಲ್ಪ ಹೀಗೆ ಬರೆದುಕೊಂಡರೆ ಡೂಪ್ಲಿಕೇಷನ್ ಆಫ್ ವರ್ಕ್ ಆಗುತ್ತದೆ, ಹೆಚ್ಚು ಕೆಲಸವಾಗುತ್ತದೆ, ಅದಕ್ಕೋಸ್ಕರ ಇಂಗ್ಲೀಷಿನಲ್ಲಿಯೇ ಮಾಡೋಣ ಎಂದು ಹೈಕೋರ್ಟಿನವರು ತೀರ್ಮಾನ ತೆಗೆದುಕೊಂಡರು. ಅದಕ್ಕೆ ಸರ್ಕಾರದವರು, ಅವರು ನಡೆಸಿಕೊಂಡು ಹೋಗತಕ್ಕ ವಿಚಾರ ಎಂದು ಅದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪರಿಶಿಷ್ಟದಲ್ಲಿ ಎರಡನೇ ಭಾಗಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತಿದ್ದೇನೆ. ಆಫೀಸುಗಳಲ್ಲಿ ಕನ್ನಡ ಬರುವುದಿಲ್ಲ ಎಂದು ಕನ್ನಡ ತರಗತಿಗಳನ್ನು ತೆಗೆದಿದ್ದೀರಾ ? ನೂರಕ್ಕೆ ಎಷ್ಟು ಜನಗಳಿಗೆ ಕನ್ನಡ ಬರುವುದಿಲ್ಲ ?

ಶ್ರೀ ಎಸ್. ಆರ್. ಕಂಠಿ.—ಯಾರಿಗೆ ಬರುವುದಿಲ್ಲ ಅವರು ಕಲಿತುಕೊಳ್ಳಲಿ ಎಂದು ಮಾಡಿದೆ, ಬಹಳ ಸ್ವಲ್ಪ ಜನರಿಗೆ ಕನ್ನಡ ಬರುವುದಿಲ್ಲ. ಬಹಳ ಜನರಿಗೆ ಬರುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಕನ್ನಡವನ್ನು ಎಲ್ಲ ಕಡೆಯೂ ಜಾರಿಗೆ ತರಬೇಕೆಂದು ತೀರ್ಮಾನವಾಗಿದ್ದರೂ ಅದರಲ್ಲಿ ಕಾಲವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ತಾಲ್ಲೂಕು ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆ ಮಾಡಬೇಕೆಂದು ಮಂತ್ರಿಮಂಡಲ ತೀರ್ಮಾನ ತೆಗೆದುಕೊಂಡಿದೆ. ಅದನ್ನು ಜಾರಿಯಲ್ಲಿ ತರುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಮಂತ್ರಿಗಳಲ್ಲಿ ಕೆಲವರಿಗೆ ಕನ್ನಡ ಬರುವುದಿಲ್ಲ ಎನ್ನುವುದು ತಮಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಕನ್ನಡ ಬರುವುದಿಲ್ಲ, ಬರುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕನ್ನಡ ಗೊತ್ತಿಲ್ಲದೆ ಇದ್ದರೆ 'ಕ್ವಿಟ್ ದಿ ಚೇರ್' ಎಂದು ಘೋಷಣೆ ಕೊಟ್ಟಿರುವುದನ್ನು ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ಎಸ್. ಆರ್. ಕಂಠಿ. —ಅವರು ಹಾಗೆ ಹೇಳಿರುವುದು ಕನ್ನಡದಲ್ಲಿ ಪಾಠ ಹೇಳಿಕೊಡಲು ಆಗದೆ ಇದ್ದರೆ ಮನೆಗೆ ಹೋಗಿ ಎಂದು ಶಿಕ್ಷಕರಿಗೆ ಹೇಳಿದ್ದಾರೆ. ಅವರು ಮಂತ್ರಿಗಳ ವಿಚಾರದಲ್ಲಿ ಹಾಗೆ ಹೇಳಿಲ್ಲ.

QUESTIONS FOR ANSWERS ON THE DAY

(but not taken up)

Pick-up Across Shimsha River

151. Sri G. MADE GOWDA (Kirugavalu).—

Will the Minister for Public Works be pleased to state :—

(*a*) is it a fact the plan and estimate is ready for execution of a pick-up across Shimsha river near Iggalur, Channapatna Taluk;

(*b*) if so, what is the total cost of the project;

(*c*) when does Government take up the work ?

A.—Sri VEERENDRA PATIL (Minister for Public Works).—

(*a*) Not yet.

(*b*) Does not arise.

(*c*) Does not arise.

Bridge over Sharavathi river near Honnavar

156. Sri M. M. JALISATGI (Bhatkal).—

Will the Minister for Public Works be pleased to state:—

(*a*) when the bridge over Sharavathi River near Honnavar was to be completed as per the contract;

(*b*) the time required for the completion of the said bridge;

(*c*) the reasons for its delay;

(*d*) the action Government proposes to take for its early completion?

A.—Sri VEERENDRA PATIL (Minister for Public Works).—

(*a*) 19-12-1964.

(*b*) Within 2 years.

(*c*) Due to natural and unforeseen causes *viz.*, deeper foundations and addition of five more spans at the suggestion of Government of India.

(*d*) Every effort is being made to complete the work as early as possible.

Member's Representation

Mr. DEPUTY SPEAKER.—Short-Notice questions are over. Now Call Attention.

ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಸ್ವಾಮಿ, ನಾನು ಒಂದು ನೂಡನೆಯನ್ನು ಕಳಿಸಿದ್ದೆ. ಅದರ ಬಗ್ಗೆ ಬಹಳ ಜನ ಕಾತುರರಾಗಿದ್ದಾರೆ, ದೊಡ್ಡ ಆಂದೋಳನ ನಡೆವಿದೆ...

ಉಪಾಧ್ಯಕ್ಷರು.—ಅದು ಇಷ್ಟರಲ್ಲಿಯೇ ಸಭೆಯ ಮುಂದೆ ಬರುತ್ತದೆ.

Sri M. NAGAPPA (Raichur).— Sir, I have given an adjournment motion.

Mr. DEPUTY SPEAKER.—I will take it up tomorrow because the member has given the notice very late today.

Sri M. NAGAPPA.—I have moved an adjournment motion.

Mr. DEPUTY SPEAKER.—I had told that the member has given the notice very late today. Tomorrow we will take it up.